# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 84 |
| ಸದಸ್ಯರ ಹೆಸರು | : | ಶ್ರೀ ಮರಿತಿಬ್ಬೇಗೌಡ<br>(ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 02-03-2020. |
| ಉತ್ತರಿಸುವ ಸಚಿವರು | : | ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ<br>ಹಾಗೂ ಸಕಾಲ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯದಲ್ಲಿ 1995ನೇ ಸಾಲಿನಿಂದ 2001ನೇ ಸಾಲಿನವರೆಗೆ ಪ್ರಾರಂಭವಾಗಿರುವ ಅನುದಾನರಹಿತ ಕನ್ನಡ ಮಾಧ್ಯಮ ಪ್ರಾಥಮಿಕ ಶಾಲೆ, ಪ್ರೌಢ ಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳ ಸಂಖ್ಯೆ ಎಷ್ಟು? | 1995ನೇ ಸಾಲಿನಿಂದ 2001ನೇ ಸಾಲಿನವರೆಗೆ ಪ್ರಾರಂಭವಾಗಿರುವ ಅನುದಾನರಹಿತ ಕನ್ನಡ ಮಾಧ್ಯಮ ಪ್ರಾಥಮಿಕ ಶಾಲೆ, ಪ್ರೌಢ ಶಾಲೆಗಳ ಸಂಖ್ಯೆ:-<br>**ಪ್ರಾಥಮಿಕ ಶಾಲೆಗಳು**: 710<br>**ಪ್ರೌಢ ಶಾಲೆಗಳು**: 370<br>**ಪದವಿ ಪೂರ್ವ ಕಾಲೇಜು**: 186 |
| ಆ. | ಈ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ/ಬೋಧಕೇತರರಿಗೆ ಕನಿಷ್ಠ ವೇತನ ನೀಡಲಾಗುತ್ತಿದೆಯೇ; | ನೀಡಲಾಗುತ್ತಿದೆ. |
| ಇ. | ಈ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವವರಿಗೆ ಸೇವಾ ಭದ್ರತೆ ಇಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಅನುದಾನರಹಿತ ಖಾಸಗಿ ಪದವಿ ಪೂರ್ವ ಕಾಲೇಜುಗಳ ನೌಕರರಿಗೆ ಸಂಬಂಧಿಸಿದಂತೆ ಕೆಲವು ಸೇವಾ ಭದ್ರತೆ ಹಾಗೂ ಸೇವಾ ಸೌಲಭ್ಯಗಳನ್ನು ನೀಡಲು ಸರ್ಕಾರದ ಆದೇಶ ಸಂಖ್ಯೆ:ಇಡಿ 104 ಎಸ್‌ಇಪಿ 2005 ದಿನಾಂಕ:12-01-2006ರನ್ವಯ ಆಸ್ಪದ ಕಲ್ಪಿಸಲಾಗಿದೆ. ಅದರಂತೆ, ಪದವಿ ಪೂರ್ವ ಶಿಕ್ಷಣ ನಿರ್ದೇಶನಾಲಯದ ಸುತ್ತೋಲೆ ದಿನಾಂಕ: 11-10-2006 ಮತ್ತು ದಿನಾಂಕ:03-11-2008, ದಿನಾಂಕ:30-06-2009 ಹಾಗೂ ದಿನಾಂಕ:12-07-2010ರಲ್ಲಿ ಖಾಸಗಿ ಅನುದಾನರಹಿತ ಶಿಕ್ಷಣ ಸಂಸ್ಥೆಗಳು ಸದರಿ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಎಲ್ಲಾ ಖಾಸಗಿ ಅನುದಾನರಹಿತ ಪದವಿ ಪೂರ್ವ ಕಾಲೇಜುಗಳ ಆಡಳಿತ ಮಂಡಳಿಗಳಿಗೆ ಸೂಚಿಸಲಾಗಿದೆ.<br><br>Karnataka Education Institutions [certain terms and conditions of service of employees in private un-aided Primary and Secondary and Pre-university Education; Institutions] Rules-2005ರ ನಿಯಮದಂತೆ ಖಾಸಗಿ ಅನುದಾನರಹಿತ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರುಗಳಿಗೆ ಸೇವಾಭದ್ರತೆ ಸೌಲಭ್ಯಗಳನ್ನು ಕಡ್ಡಾಯವಾಗಿ ಒದಗಿಸಬೇಕಾಗಿದೆ. ಅದರಂತೆ ಅನುದಾನರಹಿತ ಶಾಲೆಗಳಲ್ಲಿನ ಸಿಬ್ಬಂದಿಗಳಿಗೆ ವೇತನವನ್ನು ತತ್ಸಮಾನ ಸರ್ಕಾರಿ ಸೇವೆಯಲ್ಲಿನ ಸಿಬ್ಬಂದಿಗಳ ಕನಿಷ್ಠ ಮೂಲ ವೇತನ |

| | | |
|---|---|---|
| | | ಸಮಾನವಾದಂತಹ ವೇತನವನ್ನು ನೀಡಬೇಕೆಂಬ ಮಾನ ದಂಡವನ್ನು ರೂಪಿಸಲಾಗಿದೆ.<br>ಕರ್ನಾಟಕ ಶಿಕ್ಷಣ ಕಾಯ್ದೆ-1983ರ ಸೆಕ್ಷನ್-89, 90ರಲ್ಲಿ ಪ್ರಸ್ತಾಪಿಸಿರುವಂತೆ ಅಗತ್ಯ ಸೇವಾ ಸೌಲಭ್ಯಗಳನ್ನು ಒದಗಿಸದೇ ನಿಯಮಗಳನ್ನು ಉಲ್ಲಂಘಿಸಿದ್ದಲ್ಲಿ ಶಾಲೆಗಳ ವಿರುದ್ಧ ವಿಚಾರಣೆಯನ್ನು ನಡೆಸಿ ದಂಡ ವಿಧಿಸುವಂತಹ ಅಧಿಕಾರವನ್ನು ಜಿಲ್ಲಾ ಶಿಕ್ಷಣ ನಿಯಂತ್ರಣ ಪ್ರಾಧಿಕಾರ [DERA]ಕ್ಕೆ ನೀಡಲಾಗಿದ್ದು, ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 21 ಶಾಸನ 2017, ದಿನಾಂಕ:22.04.2017 ರಲ್ಲಿ ಸೆಕ್ಷನ್-125ನ್ನು ಸೇರ್ಪಡೆ ಮಾಡಲಾಗಿದೆ.<br>"125A .Penakty for contravention of section 88, 89 and 90- Any educational institution if found guilty of contravention of either of sections 88, 89 and 90 in an enquiry conducted, after giving an opportunity of |
| | | being heard, by District Education Regulatory Authority, it shall impose a penalty which may extend to five lakh rupees." |
| ಈ. | ಈ ಸಂಸ್ಥೆಗಳಲ್ಲಿನ ಬೋಧಕ/ ಬೋಧಕೇತರರಿಗೆ ವೇತನಾನುದಾನ ನೀಡಲು ಅವಶ್ಯವಿರುವ ಅಂದಾಜು ಮೊತ್ತವೆಷ್ಟು; | 1995 ನೇ ಸಾಲಿನಿಂದ 2001 ನೇ ಸಾಲಿನವರೆಗೆ ಪ್ರಾರಂಭವಾಗಿರುವ ಖಾಸಗಿ ಅನುದಾನ ರಹಿತ ಪ್ರಾಥಮಿಕ ಶಾಲೆ, ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜುಗಳ ಸಿಬ್ಬಂದಿಯನ್ನು ವೇತನಾನುದಾನಕ್ಕೆ ಒಳಪಡಿಸಿದಲ್ಲಿ ಬೇಕಾಗಿರುವ ಅನುದಾನದ ಮೊತ್ತದ ಬಗ್ಗೆ ಮಾಹಿತಿ ಸಂಗ್ರಹಿಸಲಾಗುತ್ತಿದೆ. |
| ಉ. | ಸದರಿಯವರುಗಳಿಗೆ ವೇತನಾನುದಾನ ನೀಡಲು ಸರ್ಕಾರ ಇದುವರೆವಿಗೆ ಕೈಗೊಂಡ ಕ್ರಮಗಳೇನು? | ಆರ್ಥಿಕ ಹೊರೆಯ ಮಾಹಿತಿ ಅಂತಿಮಗೊಂಡ ನಂತರ ಪರಿಶೀಲಿಸಿ, ಈ ಬಗ್ಗೆ ಆರ್ಥಿಕ ಇಲಾಖೆಯ ಸಮಾಲೋಚನೆ ನಂತರ ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು. |

**ಇಡಿ 36 ಪಿಎಂಸಿ 2020**

[ಎಸ್.ಸುರೇಶ್ ಕುಮಾರ್]

**ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು**